ದಿನಾಂಕಃ **10.07.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಅರ್ಜಿದಾರರ ಪರ ವಕೀಲರಿಂದ :</u>**

ಸಾಕ್ಷಿ ತಮ್ಮ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿ, ಸದರಿ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳನ್ನು ಓದಿಸಿ, ಕೇಳಿ ತಿಳಿದುಕೊಂಡು ಸರಿ ಮತ್ತು ಸತ್ಯವಾಗಿರುತ್ತವೆ ಎಂದು ಸಹಿ ಮಾಡಿರುವುದಾಗಿ ತಿಳಿಸಿರುತ್ತಾರೆ.

ಇತ್ತೀಚಿನ ಪರೀಕ್ಷಾ ವರದಿಯನ್ನು ನಿಪಿ-12 ಎಂದು, ಸೈಕಲಾಜಿಕಲ್ ಅಸೆಸ್ಮೆಂಟ್ ರಿಪೋರ್ಟನ್ನು ನಿಪಿ-13 ಎಂದು, ಕೇಸ್ ಶೀಟನ್ನು ನಿಪಿ-14 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು : 2ನೇ ಎದುರುದಾರರ ಪರ ವಕೀಲರಿಂದ :</u>**

ಕಳೆದ 5 ವರ್ಷಗಳಿಂದ ನಾನು ಡಿ.ಆರ್.ಎಂ.ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದೇನೆ. ಗಾಯಾಳು ಆಸ್ಪತ್ರೆಗೆ ದಾಖಲಾದ ಸಮಯದಿಂದಲೂ ನಾನು ಆತನಿಗೆ ಚಿಕಿತ್ಸೆ ನೀಡಿರುತ್ತೇನೆ. ಆತ ದ್ವಿಚಕ್ರ ವಾಹನದಲ್ಲಿ ಹಿಂಬದಿ ಸವಾರನಾಗಿ ಹೋಗುವಾಗ ಕಾರಿನಿಂದ ಅಪಘಾತವಾಗಿರುತ್ತದೆ ಎಂದು ನಿಮಗೆ ಯಾರು ತಿಳಿಸಿರುತ್ತಾರೆ ಎಂದರೆ ಸಾಕ್ಷಿ ಆ ಬಗ್ಗೆ ಕೇಸ್ ಶೀಟಿನಲ್ಲಿ ದಾಖಲಾಗಿರುತ್ತದೆ, ಆದರೆ ಅವರ ಹೆಸರು ನಮೂದು ಆಗಿಲ್ಲ. ದಾಖಲಾದಾಗ ಆತ  ಅರೆಪ್ರಜ್ಞಾವಸ್ಥೆಯಲ್ಲಿದ್ದ, ನಂತರದಲ್ಲಿ ಅವರು ಚಿಕಿತ್ಸೆಗೆ ಸ್ಪಂದಿಸುತ್ತಿದ್ದರು. ಆತನ ದೇಹಕ್ಕೆ ಆದ ಗಾಯಗಳ ಬಗ್ಗೆ ರವಿ ಹಾಗೂ ಕಿರಣ್ ಎನ್ನುವ ವೈದ್ಯರು ಚಿಕಿತ್ಸೆ ಕೊಟ್ಟಿರುತ್ತಾರೆ. ಆಸ್ಪತ್ರೆಯಿಂದ ಬಿಡುಗಡೆಯಾದಾಗ ಅವರು ಗುಣಮುಖರಾಗಿದ್ದರು, ಆದರೆ ಸಂಪೂರ್ಣ ಗುಣಮುಖರಾಗಿರಲಿಲ್ಲ. ಅವರು ನಿಯಮಿತವಾಗಿ ಚಿಕಿತ್ಸೆಗಾಗಿ ಬರುತ್ತಿದ್ದ ಸಮಯದಲ್ಲಿ ನಿಪಿ-12 ನ್ನು ಬರೆಯಲಾಗಿರುತ್ತದೆ. ನಿಪಿ-13 ನ್ನು ತಯಾರಿಸುವಾಗ ನನ್ನ ಹೇಳಿಕೆ ಮೇರೆಗೆ ಬೇರೆ ವೈದ್ಯರು ತಯಾರಿಸಿರುತ್ತಾರೆ. ನಿಪಿ-13 ರಲ್ಲಿ ವ್ಯಕ್ತಪಡಿಸಿರುವ ಅಭಿಪ್ರಾಯಗಳು ಸದರಿ ವೈದ್ಯರ ಅಭಿಪ್ರಾಯವಾಗಿದ್ದು, ಆ ವೈದ್ಯರ ಬಳಿಗೆ ನಾನು ಗಾಯಳುವನ್ನು ಕಳುಹಿಸಿರುತ್ತೇನೆ. ನಿಪಿ-13 ರಲ್ಲಿ ಗಾಯಳುವಿನ ಕೆಲಸದ ಬಗ್ಗೆ ಇರುವ ಉಲ್ಲೇಖ ಆತನ ಹೇಳಿಕೆಯ ಮೇಲೆ ಮಾಡಿರುತ್ತಾರೆ.

**2.** ಗಾಯಾಳುವಿಗೆ ಶೇಕಡಾ 50 ರಷ್ಟು ಮಾನಸಿಕ ನ್ಯೂನ್ಯತೆ ಇರುತ್ತದೆ ಎಂದು ಹೇಳಿದ್ದು, ಅದು ಸಂಪೂರ್ಣ ದೇಹಕ್ಕೂ ಸಹ ಅಷ್ಟೇ ಇರುತ್ತದೆ. ಗಾಯಾಳು ನ್ಯಾಯಾಲಯಕ್ಕೆ ಹಾಜರಾಗಿ ನ್ಯಾಯಾಲಯದಲ್ಲಿ ಕೇಳಿದ ಎಲ್ಲಾ ಪ್ರಶ್ನೆಗಳಿಗೂ ಸ್ಪಷ್ಟವಾಗಿ, ನಿಖರವಾಗಿ ಉತ್ತರ ನೀಡಿದ್ದು, ಆತನಿಗೆ ಶೇಕಡಾ 50 ರಷ್ಟು ಮಾನಸಿಕ ನ್ಯೂನ್ಯತೆ ಇರುವುದಿಲ್ಲ ಎಂದರೆ ನನಗೆ ಆತ ಏನು ಸಾಕ್ಷಿ ನುಡಿದಿರುತ್ತಾನೆಂದ ಗೊತ್ತಿಲ್ಲ, ನನ್ನ ಪರೀಕ್ಷೆಯ ಪ್ರಕಾರ ಆತನಿಗೆ ಅಷ್ಟು ನ್ಯೂನ್ಯತೆ ಇರುತ್ತದೆ. ನಾನು ಹೇಳಿರುವ ಶೇಕಡಾ 50 ರಷ್ಟು ಮಾನಸಿಕ ನ್ಯೂನ್ಯತೆಯಲ್ಲಿ ಸಂಪೂರ್ಣ ದೇಹಕ್ಕೆ ಮೂರನೇ ಒಂದು ಭಾಗದಷ್ಟು ಮಾತ್ರ ನ್ಯೂನ್ಯತೆ ಇರುತ್ತದೆ ಎಂದರೆ ಸಾಕ್ಷಿ ಆ ಬಗ್ಗೆ ಗೆಜೆಟ್ ನಲ್ಲಿ ಇರುವುದಿಲ್ಲ ಎನ್ನುತ್ತಾರೆ.

**3.** ನಿಪಿ-13 ರಲ್ಲಿ ಹೇಳಿರುವ ಪರೀಕ್ಷೆಗಳನ್ನು ದಿನಾಂಕಃ 24.07.2024 ರಂದು ಮಾಡಿರುತ್ತಾರೆ. ಅರ್ಜಿದಾರರಿಗೆ ಅನುಕೂಲವಾಗಲೆಂದು ನಿಪಿ-13 ನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಹೆಚ್ಚು ಅಂಗ ನ್ಯೂನ್ಯತೆ ಇರುತ್ತದೆ ಎಂದು ಸುಳ್ಳು ಹೇಳಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಈ ದಿನ ಬೆರಳಚ್ಚು ಮಾಡಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ ಎಂದು ಓದಲಾಗಿದೆ.

**ಪ್ರಧಾನ ಹಿರಿಯ ಸಿಜೆ ಮತ್ತು**
**ಎಂ.ಎ.ಸಿ.ಟಿ., ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**